# ಮಾದಕ ತಾರೆ ದೀಪಿಕಾ



ಈ ವರ್ಷ 'ಏಷ್ಯಾದ ಅತ್ಯಂತ ಸೆಕ್ಸೀ ಮಹಿಳೆ' ಎಂಬ ಬಿರುದು ಬಾಲಿವುಡ್ ನಟಿ ದೀಪಿಕಾ ಪಡುಕೋಣೆಗೆ ಸಿಕ್ಕಿದೆ. ಬ್ರಿಟನ್ ಮೂಲದ ಪತ್ರಿಕೆಯೊಂದು ನಡೆಸುವ ಸಮೀಕ್ಷೆಯಲ್ಲಿ ಕೋಟ್ಯಂತರ ಜನರು ಮತ ಹಾಕಿ ಈ ಆಯ್ಕೆ ನಡೆಸಿದ್ದಾರೆ. ಕಳೆದ 13 ವರ್ಷಗಳಿಂದ ಈ ಸಮೀಕ್ಷೆ ನಡೆಯುತ್ತಿದ್ದು ಈ ವರ್ಷ ದೀಪಿಕಾ ಬಾಲಿವುಡ್‌ನ ಇನ್ನೊಬ್ಬ ನಟಿ ಪ್ರಿಯಾಂಕಾ ಚೋಪ್ರಾಳನ್ನು ಎರಡನೆ ಸ್ಥಾನಕ್ಕೆ ತಳ್ಳಿ ಅಗ್ರಸ್ಥಾನ ಗೆದ್ದಿದ್ದಾಳೆ. ವಿಶೇಷವೆಂದರೆ ಕಳೆದ ನಾಲ್ಕು ವರ್ಷಗಳಿಂದ ಏಷ್ಯಾದ ಅತ್ಯಂತ ಸೆಕ್ಸೀ ಮಹಿಳೆ ಎಂಬ ಪ್ರಶಸ್ತಿಯನ್ನು ಪ್ರಿಯಾಂಕಾ ಗೆದ್ದುಕೊಂಡಿದ್ದಳು. ಈ ಸ್ಪರ್ಧೆ ಎಷ್ಟೊಂದು ನಿಕಟವಾಗಿತ್ತೆಂದರೆ ಅಲಿಯಾ ಭಟ್ (5ನೇ ಸ್ಥಾನ), ಕತ್ರೀನಾ ಕೈಫ್ (7) ಮತ್ತು ಸೋನಂ ಕಪೂರ್ (8) ಮುಂತಾದವರನ್ನೆಲ್ಲ ದೀಪಿಕಾ ಹಿಂದಿಕ್ಕಿದ್ದಾಳೆ.

ಈ ಸೆಕ್ಸೀ ಎನ್ನುವ ಆಂಗ್ಲ ಶಬ್ದದ ಅರ್ಥವೇನಿರಬಹುದು? ಸೆಕ್ಸ್ ಎನ್ನುವ ಶಬ್ದವನ್ನು ಕಾಮ ಎಂದು ಅನುವಾದಿಸಿದರೆ, ಸೆಕ್ಸೀ ಎಂದರೆ ಕಾಮಪ್ರಚೋದಕಿ ಎಂದು ಬರೆಯಬಹುದೆ? ಆದರೆ ಇದ್ಯಾಕೋ ಸ್ವಲ್ಪ ಮುಜುಗರ ಉಂಟು ಮಾಡುವಂತಿದೆ ಎಂದೋ ಏನೋ, ಬಹುತೇಕ ಪತ್ರಿಕೆಗಳು ಇದನ್ನು ಮಾದಕ ಎಂದು ಅನುವಾದಿಸಿವೆ. 'ಏಷ್ಯಾದ ಅತ್ಯಂತ ಮಾದಕ ತಾರೆ' ಎಂದೇ ದೀಪಿಕಾಳನ್ನು ಬಣ್ಣಿಸಿವೆ. ಮಾದಕ ದ್ರವ್ಯಗಳನ್ನು ಸೇವಿಸಬೇಡಿ ಎಂದು ಹಿರಿಯರು ಕಿರಿಯರಿಗೆ ಬುದ್ಧಿ ಹೇಳುವುದುಂಟು. ಆದರೆ ಮಾದಕ ತಾರೆಗೆ ಮನಸೋಲದವರು ಯಾರು? ಹಾಗೆಂದೇ ಬಹುತೇಕ ಯುವಜನರು ದೀಪಿಕಾ ಎಂಬ ಮಾದಕ ತಾರೆಗೆ ಮತ ಹಾಕಿದ್ದಾರೆ.

ಸುದ್ದಿ ತಿಳಿದಾಕ್ಷಣ ದೀಪಿಕಾ ಕೂಡಾ ಸ್ವಲ್ಪ ಮುಜುಗರ ಅನುಭವಿಸಿದಂತಿದೆ. 'ಸುದ್ದಿ ಕೇಳಿ ನನ್ನ ಮುಖದಲ್ಲಿ ಮುಗುಳ್ನಗೆ ಮೂಡಿತು. ಆದರೆ ಸೆಕ್ಸೀ ಎನ್ನುವುದು ವಿಭಿನ್ನ ಜನರಿಗೆ ವಿಭಿನ್ನ ಅರ್ಥ ಕೊಡುತ್ತದೆ. ನನ್ನ ಪ್ರಕಾರ ಇದು ಕೇವಲ ದೇಹಕ್ಕೆ ಸಂಬಂಧಿಸಿದ್ದಲ್ಲ. ಇನ್ನೊಬ್ಬರಲ್ಲಿ ನೆಮ್ಮದಿ ಸೆಕ್ಸೀ; ಆತ್ಮವಿಶ್ವಾಸ ಸೆಕ್ಸೀ; ಮುಗ್ಧತೆ ಮತ್ತು ಹೊಂದಾಣಿಕೆಯಿಂದ ಇರುವುದೂ ಸೆಕ್ಸೀ' ಎಂದು ದೀಪಿಕಾ ದಿಟ್ಟತನದಿಂದ ಹೇಳಿದ್ದಾಳೆ. ಅದೇನೇ ಇದ್ದರೂ 2016ರ ಕೊನೆಯಲ್ಲಿ ಬಂದಿರುವ ಈ ವರ್ಷದ ಸಾಧನೆ ದೀಪಿಕಾಗೆ ಕೋಡು ಮೂಡಿಸಿರುವುದಂತೂ ನಿಶ್ಚಿತ. ಅದರಲ್ಲೂ ಹಾಲಿವುಡ್‌ಗೆ ಎಂಟ್ರಿ ಕೊಟ್ಟಿರುವ ಹೊತ್ತಿನಲ್ಲಿ ಈ ಪ್ರಶಸ್ತಿಯೂ ನೆರವಿಗೆ ಬರಬಹುದು. ಹಾಲಿವುಡ್‌ನ ಸೂಪರ್‌ತಾರೆ ವಿನ್ ಡೀಸೆಲ್ ಜತೆಗೆ 'ಎಕ್ಸ್‌ಎಕ್ಸ್‌ಎಕ್ಸ್: ರಿಟರ್ನ್ ಆಫ್ ಕ್ಸಾಂಡರ್ ಕೇಜ್' ಚಿತ್ರದಲ್ಲಿ ದೀಪಿಕಾ ಹೀರೋಯಿನ್.

ಬಾಲಿವುಡ್‌ನಲ್ಲೂ ದೀಪಿಕಾಳ ಹಲವು ಚಿತ್ರಗಳು 2017ರಲ್ಲಿ ತೆರೆ ಕಾಣಲಿವೆ. ಮುಖ್ಯವಾಗಿ ಖ್ಯಾತ ನಿರ್ದೇಶಕ ಸಂಜಯ್ ಲೀಲಾ ಬನ್ಸಾಲಿಯ 'ಪದ್ಮಾವತಿ' ಬಗ್ಗೆ ಭಾರೀ ನಿರೀಕ್ಷೆ ಇದೆ. ಈ ಚಿತ್ರದಲ್ಲಿ ದೀಪಿಕಾಗೆ ಜೋಡಿ ರಣವೀರ್‌ಸಿಂಗ್. ಜತೆಗೆ ಶಾಹಿದ್ ಕಪೂರ್ ಮತ್ತು ಐಶ್ವರ್ಯ ರೈ ಕೂಡಾ ಇರುವ ಈ ಚಿತ್ರ 2017ರ ಸೂಪರ್‌ಹಿಟ್ ಆಗುವ ಬಗ್ಗೆ ಈಗಾಗಲೆ ಮಾತುಗಳು ಕೇಳಿಬರುತ್ತಿವೆ. ಪದ್ಮಾವತಿಯ ಪಾತ್ರಕ್ಕೆ ದೀಪಿಕಾ 13 ಕೋಟಿ ರೂಪಾಯಿ ಸಂಭಾವನೆ ಪಡೆಯುತ್ತಿದ್ದಾಳೆಂದೂ ಸುದ್ದಿ ಹಬ್ಬಿದೆ.

ಸದ್ಯಕ್ಕೆ ಬಾಲಿವುಡ್‌ನಲ್ಲಿ ಅತ್ಯಧಿಕ ಸಂಭಾವನೆ ಪಡೆಯುತ್ತಿರುವ ನಟಿ ಯಾರು ಎಂಬ ಪ್ರಶ್ನೆಯೂ ಈಗ ಎದ್ದಿದೆ. ದೀಪಿಕಾ ಹೊಂದಿರುವ ಈ ಪಟ್ಟಕ್ಕೆ ಕಂಗನಾ ರನೌತ್ ಸಂಚಕಾರ ಒಡ್ಡಿದ್ದಾಳೆ ಎನ್ನುವುದು ಸುದ್ದಿ. ತನ್ನ ಎರಡು ಹೊಸ ಚಿತ್ರಗಳ ನಿರ್ಮಾಪಕರಿಗೆ ಕಂಗನಾ ತಲಾ 15 ಕೋಟಿಯ ಬೇಡಿಕೆ ಇಟ್ಟಿದ್ದಾಳಂತೆ. ದೀಪಿಕಾ ಮತ್ತು ಕಂಗನಾ ಮಧ್ಯೆ ನಡೆದಿರುವ ಶೀತಲ ಸಮರಕ್ಕೆ ದೀರ್ಘ ಇತಿಹಾಸವೂ ಇದೆ. ಹಿಂದೊಮ್ಮೆ 'ಅತ್ಯುತ್ತಮ ನಟಿ' ರಾಷ್ಟ್ರೀಯ ಪ್ರಶಸ್ತಿ ಗೆದ್ದ ದೀಪಿಕಾ ಅದನ್ನು ಕಂಗನಾಗೆ ಅರ್ಪಿಸುವುದಾಗಿ ಮಾಧ್ಯಮಗಳ ಮುಂದೆ ಹೇಳಿದ್ದಳು. ಕಂಗನಾ ತಿರುಗಿಬಿದ್ದು, ದೀಪಿಕಾ ಒಮ್ಮೆಯೂ ನನಗೆ ಕರೆ ಮಾಡಿಲ್ಲ ಎಂದಿದ್ದಳು. ಬಳಿಕ ದೀಪಿಕಾ ನೇರವಾಗಿ ಕಂಗನಾಗೆ ಕರೆ ಮಾಡಿ ಮಾತನಾಡಿದರೂ ಇವರಿಬ್ಬರ ನಡುವಣ ಮುಸುಕಿನ ಯುದ್ಧ ನಿಂತಿರಲಿಲ್ಲ. 'ತನು ವೆಡ್ಸ್ ಮನು' ಚಿತ್ರದ ಪ್ರೀಮಿಯರ್ ಷೋಗೆ ಕಂಗನಾ ಕರೆದರೂ ದೀಪಿಕಾ ಹೋಗಲಿಲ್ಲ.

ಸೆಕ್ಸೀ ಮಹಿಳೆಯ ಪಟ್ಟ ಏನೇ ಇರಲಿ, ಸದ್ಯಕ್ಕಂತೂ ದೀಪಿಕಾ ಅತ್ಯಧಿಕ ಸಂಭಾವನೆ ಪಡೆಯುವ ನಟಿ ಎಂಬ ಪಟ್ಟವನ್ನು ಉಳಿಸಿಕೊಳ್ಳುತ್ತಾಳೆಯೋ ಎಂಬುದರ ಬಗ್ಗೆಯೇ ಬಾಲಿವುಡ್‌ನಲ್ಲಿ ಚರ್ಚೆ ನಡೆದಿದೆ. ಕಂಗನಾಳ 15 ಕೋಟಿಗೆ ನಿರ್ಮಾಪಕರು ಓಕೆ ಎಂದರೆ, ದೀಪಿಕಾ ಕೂಡಾ ತನ್ನ ಮುಂದಿನ ಚಿತ್ರಕ್ಕೆ 17 ಕೋಟಿ ಕೇಳಬಹುದು ಎನ್ನಲಾಗುತ್ತಿದೆ. ಸೆಕ್ಸೀ ಹೌದೋ ಅಲ್ಲವೋ, ಬಾಲಿವುಡ್‌ನ ಕಾಸ್ಟ್ಲೀ ನಟಿಯಂತೂ ದೀಪಿಕಾಳೇ ಸರಿ. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65